ಶಿಕ್ಷಣದಿಂದ ಶ್ರೇಷ್ಠತೆ

# ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ)

ಜಯಲಕ್ಷ್ಮೀಪುರಂ, ಮೈಸೂರು – 570 012

ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜನೆ ಹಾಗೂ ನ್ಯಾಕ್‌ನಿಂದ "ಎ" ಶ್ರೇಣಿಯ ಮಾನ್ಯತೆ ಪಡೆದಿದೆ

ಶ್ರೇಷ್ಠತೆಯ ಸಾಮರ್ಥ್ಯವಿರುವ ಕಾಲೇಜು

---

ದಿನಾಂಕ 02.01.2020

# ವಿ.ವಿ. ಅಂತರ ಕಾಲೇಜು ಕಬಡ್ಡಿ ಪಂದ್ಯಾವಳಿಗೆ ವಿದ್ಯುಕ್ತ ಚಾಲನೆ



ಮೈಸೂರು, ಜನವರಿ 2 – ಬೆಂಗಾಲ್ ವಾರಿಯರ್ಸ್‌ನ ರಾಷ್ಟ್ರೀಯ ಕಬಡ್ಡಿ ಆಟಗಾರ ಶ್ರೀ ಅವಿನಾಶ್ ಎ. ಆರ್. ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದಿಂದ ಆಯೋಜಿಸಿರುವ 2019–20ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯ ಅಂತರಕಾಲೇಜು ಪುರುಷರ ಕಬಡ್ಡಿ ಪಂದ್ಯಾವಳಿಯನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ಪಂದ್ಯಾವಳಿಯು ಹೆಚ್ಚಾಗಿ ಮನಸ್ಸಿನ ದೃಢತೆ ಹಾಗೂ ಕಲಿಕೆಯಿಂದ ಕೂಡಿರುತ್ತದೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಈ ಆಟವನ್ನು ಕಲಿತು, ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಒತ್ತಾಯಿಸಿದರು.



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಹಾಜನ ವಿದ್ಯಾ ಸಂಸ್ಥೆಯ ಗೌ. ಕಾರ್ಯದರ್ಶಿಗಳಾದ ಡಾ. ವಿಜಯಲಕ್ಷ್ಮೀ ಮುರುಳೀಧರ್ ಅವರು ಮಾತನಾಡಿ, ಆರೋಗ್ಯಪೂರ್ಣ, ಸೌಹಾರ್ದ ಯುತ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಈ ಆಟ ಸಹಕಾರಿ ಯಾಗಿದೆ. ಈ ಆಟವು ಇಂದು ಭಾರತದಲ್ಲದೇ ಇಡೀ ವಿಶ್ವದಲ್ಲಿ ಹೆಚ್ಚಿನ ಪ್ರಾಧಾನ್ಯತೆ ಹಾಗೂ ಪ್ರಾಮುಖ್ಯತೆ ಪಡೆಯುತ್ತಿದೆ. ವಿದ್ಯಾರ್ಥಿಗಳು ಹೆಚ್ಚಾಗಿ ಈ ಆಟವನ್ನು ಕಲಿತು, ಸ್ಪರ್ಧಾತ್ಮಕ ಬೆಳವಣಿಗೆಯನ್ನು ರೂಢಿಸಿಕೊಳ್ಳಬೇಕು, ತೀರ್ಪು ನ್ಯಾಯಯುತವಾಗಿರಲಿ ಎಂದು ಶುಭನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಪ್ರಸ್ತಾವಿಕ ನುಡಿಗಳನ್ನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ವೆಂಕಟರಾಮುರವರು ಮಾತನಾಡಿ, ಕಬಡ್ಡಿ ಭಾರತದ ಒಂದು ಗ್ರಾಮೀಣ ಕ್ರೀಡೆ. ಇಂದು ಈ ಕ್ರೀಡೆಗೆ ಹೆಚ್ಚಿನ ಮಹತ್ವ ಮತ್ತು ಜನಾರ್ಕಷಣೆ ಪಡೆದಿದ್ದು, ರಾಷ್ಟ್ರೀಯ ಹಾಗೂ ಅಂತರರಾಷ್ಟೀಯ ಮಟ್ಟದಲ್ಲಿ ಬೆಳೆದಿದೆ. ರಾಜ್ಯ ರಾಜ್ಯಗಳ ಹಾಗೂ ದೇಶ ದೇಶಗಳ ನಡುವೆ ಸಂಸ್ಕೃತಿ ಮತ್ತು ಬಾಂಧವ್ಯ ಬೆಸೆಯುವ ಶಕ್ತಿಯಾಗಿದೆ ಎಂದರಲ್ಲದೆ, ಆಗಮಿಸಿರುವ ಎಲ್ಲಾ ಸ್ಪರ್ಧಿಗಳಿಗೆ ಶುಭ ಕೋರಿದರು.




ಈ ಕಬಡ್ಡಿ ಪಂದ್ಯಾವಳಿಯ ಬಹುಮಾನದ ಪ್ರಾಯೋಜಕರಾದ ಕಾಲೇಜಿನ ಎರಡನೇ ಬಿ.ಬಿ.ಎ. ವಿದ್ಯಾರ್ಥಿ ಶ್ರೀ ರಿಷಬ್ ಅವರಿಗೆ ಕಾಲೇಜಿನ ಅಧ್ಯಾಪಕ ಮತ್ತು ಅಧ್ಯಾಪಕೇತರರ ವೃಂದ ಕೃತಜ್ಞತೆ ಅರ್ಪಿಸಿದರು. ವೇದಿಕೆಯಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಎಸ್. ಆರ್. ರಮೇಶ್, ಕುಶಾಲನಗರ ಕಬಡ್ಡಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಪ್ರಭಾಕರ್, ಉಪಪ್ರಾಂಶುಪಾಲರಾದ ಶ್ರೀಮತಿ ಬಿ.ಆರ್. ಜಯಕುಮಾರಿ, ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಎಚ್. ಎನ್ ಭಾಸ್ಕರ್ ಮತ್ತು ಶ್ರೀ ಪಿ.ಎಸ್. ಮಧುಸೂದನ್, ಉಪಸ್ಥಿತರಿದ್ದರು.

ಕು. ಬಿಂಬ ಮತ್ತು ಕು. ಭಾರತಿ ಪ್ರಾರ್ಥಿಸಿದರು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಎಚ್. ಎನ್ ಭಾಸ್ಕರ್ ಸ್ವಾಗತ ಕೋರಿ, ಅತಿಥಿಗಳನ್ನು ಪರಿಚಯಿಸಿದರು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಪಿ.ಎಸ್. ಮಧುಸೂದನ್, ವಂದನಾರ್ಪಣೆ ನೆರವೇರಿಸಿದರು. ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಸಿದ್ದಪ್ಪ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಬೋಧಕ ವರ್ಗ, ಬೋಧಕೇತರ ವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

**ಪ್ರಾಂಶುಪಾಲರು**